





ಮತ್ತೊಂದು ವೈಶಿಷ್ಟ್ಯವೆಂದರೆ, ಹೆಚ್ಚು ಪರಿಚಿತರ ಬೆನ್ನ ಮೇಲೆ 'ಹೊಡೆದು' ಮಾತನಾಡಿಸುವುದು.

'ಈಗ ಮೂರು ನಾಲ್ಕು ದಿನಗಳಿಂದ ಒಣಗಿದ ಎಲೆ ಬರ್ನಿಂಗ್ ಸ್ಮೆಲ್ಲು, ಸ್ಮೋಕು ಬರ್ತಾ ಇದೆ ಅಲ್ಲವಾ?' ಎಂದು ಕೇಳಿದರು.

'ಹೌದು, ಒಂದೊಂದು ಸಲಿ ಬರ್ತಾ ಇದೆ. ಮೊದಲಿನ ತರಹ ಗಂಟೆಗಟ್ಟಲೆ ಸುಟ್ಟ ಹಾಗೆ ಕಾಣ್ತಾ ಇಲ್ಲ' ಎಂದೆ.

'ಹೌದು ಬ್ರದರ್, ಈ ಪಾರ್ಕ್‌ನಲ್ಲಿ ಎಲ್ಲೂ ಲೀವ್ಸ್ ಸುಟ್ಟಿರೋ ಎವಿಡೆನ್ಸ್ ಇಲ್ಲ. ಆದರೆ ನಾನು ತೋರಿಸ್ತೀನಿ! ಸೀ ಆ ಲೇಡಿ ಏನು ಮಾಡ್ತಾ ಇದ್ದಾಳೆ' ಎಂದು ಉದ್ಯಾನದ ಒಂದು ಕೊನೆಯನ್ನು ತೋರಿಸಿದರು. ಅಲ್ಲಿ ಇಬ್ಬರು ಹೆಂಗಸರು ಕೆಳಗೆ ಬಿದ್ದಿದ್ದ ಮರದ ರಂಬೆಗಳನ್ನು ಆಯ್ದುಕೊಂಡು ಕಟ್ಟು ಕಟ್ಟುತ್ತಿದ್ದರು.

'ಸೀ ಅವರು ಜಿಪ್ಸಿ ತರ ಕಾಣ್ತಾರೆ. ಪಾರ್ಕ್ ಆಚೆ ಮೆಟ್ರೋ ಪಿಲ್ಲರ್ ಕೆಳಗೆ ಆ ಡ್ರೈ ಬ್ರ್ಯಾಂಚಿಂದ ಕುಕ್ ಮಾಡ್ತಾರೆ. ಆಗಲೇ ಆ ಸ್ಮೆಲ್ ಬರೋದು' ಎಂದು ಹೇಳಿ ವೇಗವಾಗಿ ಮುನ್ನಡೆದರು.

ನನ್ನ ನಡಿಗೆಯನ್ನು ಮುಗಿಸಿ, ಉದ್ಯಾನದಿಂದ ಹೊರಗೆ ಮೆಟ್ರೋ ಕಂಬದ ಕಡೆ ಹೊರಟೆ. ಅಲ್ಲೇ ಮೂಲೆಯಲ್ಲಿ ಅಲೆಮಾರಿಗಳ ಸಂಸಾರ ಬೀಡುಬಿಟ್ಟಿತ್ತು. ಮಾರಲು ಸಿದ್ಧಪಡಿಸಿದ ಬಣ್ಣ ಬಣ್ಣದ ಬಲೂನುಗಳನ್ನು ಸಿಕ್ಕಿಸಿದ್ದ ಎರಡು ಮೂರು ದೊಡ್ಡ ಕೋಲುಗಳು ಅಲ್ಲೇ ಇದ್ದವು. ಕಾಲುಹಾದಿಯ ಮೇಲೆ ಕೆಲವರು ಇನ್ನೂ ಹೊದ್ದು ಮಲಗಿದ್ದರು. ಕಟ್ಟಿಗೆ ತಂದಿದ್ದವಳು ಆಗಲೇ ಒಲೆಗೆ ಉರಿಯನ್ನು ಹಾಕಿ, ಅದರ ಮೇಲೆ ಒಂದು ಪಾತ್ರೆಯನ್ನು ಇಟ್ಟಿದ್ದಳು. ಆ ಉರಿಯಲ್ಲೇ ಎರಡು ಅಗರಬತ್ತಿಗಳನ್ನು ಹೊತ್ತಿಸಿಕೊಂಡು, ಉದ್ಯಾನದ ಹೊರಾವರಣದ ರಕ್ಷಣೆಗೆ ನಿಲ್ಲಿಸಿರುವ ಜಾಲಂದರದ ಸರಳುಗಳಿಗೆ ನೇತು ಹಾಕಿದ್ದ ದೇವರ ಪಟಕ್ಕೆ ಅದರಿಂದ ಆರತಿ ಬೆಳಗಿದಳು.

ನನ್ನ ಯೋಚನೆ ಬೇರೆ ಕಡೆ ತಿರುಗಿತು. ಇವರಿಗೆ ಉಚಿತ ಪಡಿತರ ಸಿಗುತ್ತದೆಯೇ? ಉಜ್ವಲ ಯೋಜನೆಯಡಿ ಇವರಿಗೆ ಏಕೆ ಇನ್ನೂ ಗ್ಯಾಸ್ ಸಿಲಿಂಡರ್ ಸಿಕ್ಕಿಲ್ಲ? ಬಲೂನಿನ ವ್ಯಾಪಾರ ಮಾಡುವುದರಿಂದ, ಭಿಕ್ಷುಕರಲ್ಲದ ಇವರಿಗೆ ನಿರಾಶ್ರಿತರ ಕೇಂದ್ರದಲ್ಲಿ ಇರಲು ಆಗುವುದಿಲ್ಲವೇ? ಬೀದಿ ಬದಿಯಲ್ಲೇ ಮಲಗಬೇಕೆ? ಸರ್ಕಾರ ಮಾಡಿರುವ ಅನೇಕ ಯೋಜನೆಗಳ ಫಲ ಇವರಿಗೆ ಸಿಕ್ಕುತ್ತಿದೆಯೇ? ನನಗೆ ಉತ್ತರ ಗೊತ್ತಿಲ್ಲದ ಪ್ರಶ್ನೆಗಳ ಸರಮಾಲೆ.

ಆ ರಸ್ತೆಯಲ್ಲಿ ನಾನು ಓಡಾಡುತ್ತಿರುತ್ತೇನೆ. ನಾನು ನೋಡಿರುವಂತೆ ಅನೇಕ ಗೂಟದ ಕಾರುಗಳು; ಕೆಂಪುದೀಪ ಹೊತ್ತ – ಆ್ಯಂಬುಲೆನ್ಸ್ ಅಲ್ಲದ ವಾಹನಗಳು; ಹಿಂದೆ–ಮುಂದೆ ಮುಂಗಾವಲು ಬೆಂಗಾವಲು ವಾಹನಗಳ ಜೊತೆ ಓಡುವ ವಾಹನಗಳ ಸಾಲು; ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಎಂಬ ಫಲಕದಿಂದ ಅಲಂಕೃತಗೊಂಡ ವಾಹನಗಳು – ಇವುಗಳ ಒಳಗೆ ಜನಸಾಮಾನ್ಯರಿಗೆ ಒಳಿತನ್ನು ಮಾಡುವ ಯೋಜನೆಗಳನ್ನು ಹೊತ್ತ, ಅನುಭೂತಿಯೇ ಮೈವೆತ್ತ ಜನರು ಯೋಚನಾಮಗ್ನರಾಗಿ ಧಾವಂತದಿಂದ ಹೋಗಿ ಬರುತ್ತಿರುತ್ತಾರೆ. ಅಲ್ಲೇ ಪಕ್ಕದಲ್ಲಿ ರಸ್ತೆಯ ಅಂಚಿನಲ್ಲಿ ಬಣ್ಣ ಬಣ್ಣದ ಬಲೂನಿನ ಹಿಂದೆ ದಟ್ಟ ಹೊಗೆ ಕೂಡ ಧಾವಂತದಿಂದ ಆಕಾಶದೆಡೆಗೆ ಓಡುತ್ತಿರುತ್ತದೆ.

ಸಾಮಾನ್ಯರೆಡೆಗೆ ಆಡಳಿತ, ಏಕಗವಾಕ್ಷಿ ಯೋಜನೆ ಮುಂತಾದವು ಇವೆ. ಅಂತಹ ಯೋಜನೆಗಳು ಇವೆ ಎಂಬ ಅರಿವು ವಿದ್ಯಾಭ್ಯಾಸ ವಂಚಿತರಾದ ಇವರಿಗೆ ಹೇಗೆ ತಿಳಿಯುತ್ತದೆ? ಅವರಿಗೆ ಇವನ್ನು ತಿಳಿಸಿ, ಅದರ ಫಲವನ್ನು ಒದಗಿಸಿಕೊಡುವ, ನಿಸ್ಪೃಹ, ನಿಷ್ಕಳಂಕ, ಶುದ್ಧಹಸ್ತರಾದ ಯುವ ಸ್ವಯಂಸೇವಕರ ಪಡೆ ತಯಾರಾಗಬೇಕಾಗಿದೆ ಅನ್ನಿಸಿತು.

ಅದನ್ನೇ ಯೋಚನೆ ಮಾಡುತ್ತಾ ಮನೆಯ ಕಡೆ ಹೆಜ್ಜೆ ಹಾಕಿದೆ. ಮತ್ತೆ ರಪ್ಪೆಂದು ಭುಜದ ಮೇಲೆ ಹೊಡೆತ ಬಿತ್ತು.

'ಏನ್ ಬ್ರದರ್, ಏನೋ ಡೀಪ್ ಆಗಿ ಥಿಂಕ್ ಮಾಡ್ತಾ ಇದ್ದೀರಿ?' – ಇಂಗ್ಲಿಷ್ ಅಣ್ಣ ಕೈಯಲ್ಲಿ ತರಕಾರಿ ಚೀಲ ತೂಗಿಸುತ್ತ, ನನ್ನ ಪಕ್ಕಕ್ಕೆ ಬಂದರು. ಆ ಅಲೆಮಾರಿಗಳ ಠಿಕಾಣಿ, ಅವರ ಕಷ್ಟದ ಜೀವನದ ವಿಚಾರಗಳನ್ನು ಹೇಳತೊಡಗಿದೆ.

ಅವರು 'ಡೋಂಟ್ ವರಿ ಬ್ರದರ್, ಇವತ್ತೋ ನಾಳೆನೋ ಏರಿಯಾ ಪೊಲೀಸ್ ಆಫೀಸರ್‌ಗೋ ಕಾರ್ಪೊರೇಷನ್ ನೋಡಲ್ ಆಫೀಸರ್‌ಗೋ ಫೋನ್ ಮಾಡ್ತೀನಿ' ಎಂದರು.

ಅಲೆಮಾರಿಗಳ ಜೀವನದಲ್ಲಿ ಚೈತ್ರದ ಚಿಗುರು ಮೂಡುವ ಭರವಸೆ ಸಿಕ್ಕಿದಂತಾಯಿತು. 'ಅದರಿಂದ ಅನುಕೂಲ ಆಗುತ್ತಲ್ವ?' ಎಂದು ಅಮಾಯಕನಂತೆ ಪ್ರಶ್ನಿಸಿದೆ.

'ವೈ ನಾಟ್ ಬ್ರದರ್, ಟೂ ಡೇಸಲ್ಲಿ ಅವರನ್ನ ಇಲ್ಲಿಂದ ಎತ್ತಂಗಡಿ ಮಾಡ್ತಾರೆ. ದೇ ಹ್ಯಾವ್ ಪವರ್, ಯು ಸೀ' ಎಂದು ಬಲಕ್ಕೆ ತಿರುಗಿ ಅವರ ಮನೆಯ ಕಡೆಗೆ ಹೊರಟರು.

ಅವರ 'ಪವರ್' ನೆನೆಸಿಕೊಂಡು ಮಾತು ಹೊರಡದೆ, ಬಾಯಿಬಿಟ್ಟುಕೊಂಡು ನಾನು ಅಲ್ಲೇ ನಿಂತುಕೊಂಡೆ.

ಚಿತ್ರಗಳು ಲೇಖಕರವು

ಪ್ರತಿಕ್ರಿಯಿಸಿ: feedback@sudha.co.in